ಅಸಲು ದಾವಾ ನಂ. **93/2014 :**
ಡಿ ಡಬ್ಲ್ಯೂ **:1**

(ಇಂದು ದಿನಾಂಕಃ **24-03-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದಃ

ಈ ಕೇಸನ್ನು ನನ್ನ, 2ನೇ ಪ್ರತಿವಾದಿ,4, 5, 6ನೇ ಪ್ರತಿವಾದಿ ಮತ್ತು 10ನೇ ಪ್ರತಿವಾದಿ ಸೇರಿ 13 ಜನರ ವಿರುದ್ಧ ದಾವೆ ದಾಖಲಿಸಿರುತ್ತಾರೆ. ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ಸ ನಂ.38 ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಯ ಖಾತೆ 87-88 ರಲ್ಲಿ ಸರ್ಕಾರದಿಂದ ಉಚಿತವಾಗಿ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದ ಎಂ ಆರ್ ಅನ್ನು ಹಾಜರುಪಡಿಸಿರುತ್ತೇನೆ. ನನ್ನ ಹೆಸರಿಗೆ ಖಾತೆ ಬರುವ ಮೊದಲು ಚಿಕ್ಕತಾಯಿಯವರ ಹೆಸರಿನಲ್ಲಿ ಇತ್ತು. ಸದರಿ ಆಸ್ತಿಯ ಖಾತೆ ಈ ಕೇಸಿನ ವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ.

ಸ ನಂ. 38 ರಲ್ಲಿ 26 ಗುಂಟೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ. ನನ್ನ ಹೆಸರು ಸಣ್ಣರಾಮಯ್ಯ ಃಉಃ ಸಣ್ಣಯ್ಯ. 1987-88 ರಲ್ಲಿ ಸ ನಂ.38 ವಿಸ್ತೀರ್ಣ 26 ಗುಂಟೆ ನನ್ನ ಹೆಸರಿಗೆ ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆ ನನ್ನ ಹೆಸರಿನಲ್ಲಿ ಇದೆ. ಎಂ ಆರ್ 87-88 ರಡಿ ವಾದಿಯ ಹೆಸರಿಗೆ ಯಾವುದಾದರೂ ಆಸ್ತಿಗೆ ಖಾತೆ ಆಗಿದೆಯಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಸ ನಂ.38 ರಲ್ಲಿ 26 ಗುಂಟೆ ನನ್ನ ಹೆಸರಿಗೆ ಖಾತೆ ಆಗಿಲ್ಲ ಮತ್ತು ಅದು ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಕುಳುವಾಡಿಕೆ

ಮಂಜೂರಾತಿ ನನ್ನ ತಂದೆಯ ಹೆಸರಿಗೆ ಆಗಿರುತ್ತದೆ. ಹಿರಿಯ ನನ್ನ ಮುತ್ತಜ್ಜ ಇರುತ್ತಾರೆ. ಸದರಿ ಹಿರಿಯನಿಗೆ ಈರಯ್ಯ ಎಂಬ ಒಬ್ಬನೇ ಮಗ ಇರುತ್ತಾನೆ. ಸದರಿ ಈರಯ್ಯನಿಗೆ ನಾಲ್ಕು ಜನ ಮಕ್ಕಳು, ಅವರೆಂದರೆ ಪೋಲೀರಯ್ಯ, ದೊಡ್ಡಮ್ಮ, ಈರಮ್ಮ, ಸಣ್ಣಮ್ಮ, ಗಣನಾಗಯ್ಯ. ನಾನು ಹಾಜರುಪಡಿಸಿರುವ ವಂಶವೃಕ್ಷದಲ್ಲಿ ಈ ಮೇಲೆ ಹೇಳಿದವರು ಈರಯ್ಯನ ವಂಶಸ್ಥರೆಂದು ಹೇಳಿ ಬರೆಸಿರುತ್ತೇನೆ. ಸದರಿ ವಂಶವೃಕ್ಷವನ್ನು ನೋಟರಿಯವರಿಂದ ಮಾಡಿಸಿರುವುದಿಲ್ಲ. ನ್ಯಾಯಾಲಯದಲ್ಲಿ ವಂಶವೃಕ್ಷ ನೀಡುವಂತೆ ಅರ್ಜಿ ನೀಡಿರುತ್ತೇನೆ. 10 ವರ್ಷಗಳ ಹಿಂದೆ ವಂಶವೃಕ್ಷವನ್ನು ತೆಗೆದುಕೊಂಡಿರುತ್ತೇನೆ. ಸದರಿ ವಂಶವೃಕ್ಷವನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ವಾದಿ ಹಿರಿಯರವರ ವಂಶಸ್ಥರು ಎಂದರೆ ಸರಿಯಲ್ಲ.

ನಾನು ಮತ್ತು 2ನೇ ಪ್ರತಿವಾದಿಯರು ಕುಳುವಾಡಿಕೆದಾರರು ಅಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು 3 ರಿಂದ 13 ನೇ ಪ್ರತಿವಾದಿಯರು ಮಲ್ಲಿಗನೂರು ಗ್ರಾಮದ ಕುಳುವಾಡಿಕೆದಾರರು ಎಂದರೆ ಸರಿ. ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿಲ್ಲ. ದಾವಾ ಆಸ್ತಿಗಳು ನನ್ನ ಚಿಕ್ಕಮ್ಮ ನಾಗಮ್ಮರವರಿಗೆ ಮಂಜೂರಾಗಿರುತ್ತವೆ. ಅವರು ತೀರಿ ಹೋಗಿ 60 ವರ್ಷ ಆಗಿರುತ್ತದೆ. ಸದರಿಯವರ ಮರಣ ಪ್ರಮಾಣಪತ್ರ ಹಾಜರುಪಡಿಸಿರುವುದಿಲ್ಲ. ನಾಗಯ್ಯನ ಹೆಂಡತಿ ನಾಗಮ್ಮ ನನ್ನ ಚಿಕ್ಕಮ್ಮ ಅಲ್ಲ. ನಾಗಮ್ಮ ಕೋಂ ನಾಗಯ್ಯ ಈ ದಾವೆಯನ್ನು ದಾಖಲಿಸಿರುತ್ತಾರೆ. ವಾದಿಯ ಹೆಸರಿಗೆ ದಾವಾ ಆಸ್ತಿಗಳು ಜಂಟಿಯಾಗಿ ಹೆಚ್ ಓ ಎ ನಂಃ

111/1978-79 ರ ಪ್ರಕಾರ ಮಂಜೂರಾಗಿರುತ್ತದೆ. ಸದರಿ ಆದೇಶದ ಪ್ರಕಾರ ನಾಗಯ್ಯ, ನನಗೆ, ದೊಡ್ಡಮ್ಮ, ಮುಳ್ಳಯ್ಯ, ನಾಗಮ್ಮ, ಈರಯ್ಯ ರವರ ಹೆಸರಿಗೆ ಮಂಜೂರಾಗಿರುತ್ತದೆ.

ಸದರಿ ಆದೇಶದ ಪ್ರಕಾರ ದಾವಾ ಆಸ್ತಿಗಳು 2ನೇ ಪ್ರತಿವಾದಿಯ ಮತ್ತು ಈರಯ್ಯನಿಗೆ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ಸದರಿಯವರು ಕಾಡನ ವಂಶಸ್ಥರು ಎಂದರೆ ಸರಿ. ಸದರಿಯವರ ಹೆಸರಿಗೆ ಸ ನಂ.36,38,43,55 ಮತ್ತು 56 ಜಮೀನುಗಳು ಜಂಟಿಯಾಗಿ ಮಂಜೂರಾಗಿರುತ್ತವೆ ಎಂದರೆ ಸರಿ. ಸದರಿಯವರ ಹೆಸರಿಗೆ ಹಿಂದೂ ಕುಟುಂಬದ ಸದಸ್ಯರ ಪಾಲುದಾರಿಕೆಯ ಹೊರತಾಗಿ ಎಂದು ಮಂಜೂರಾಗಿರುತ್ತದೆ. ಸದರಿ ಆದೇಶದ ಪ್ರಕಾರ ಜಂಟಿಯಾಗಿ ಅನುಭೋಗ ಮಾಡುತ್ತಿದ್ದಾರೆ. ನಂತರ ಸದರಿಯವರು ಪ್ರತ್ಯೇಕವಾಗಿ ವಿಭಾಗ ಮಾಡಿಕೊಂಡಿಲ್ಲ. ವಿಭಾಗಪತ್ರದ ಆಧಾರದ ಮೇಲೆ ಪಹಣಿ ಪತ್ರಿಕೆಗಳು ಬಂದಿರುವುದಿಲ್ಲ.

ನನ್ನ ಹೆಸರಿಗೆ ಸರ್ಕಾರದಿಂದ ಖಾತೆ ಆಗಿರುತ್ತದೆ. ಸ ನಂ.43 ವಿಸ್ತೀರ್ಣ 02 ಎಕರೆ 04 ಗುಂಟೆ ಪಸಲಯ್ಯ ಮತ್ತು ವಸಂತರವರ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಆಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಸ ನಂ.36 ಸಣ್ಣನಾಗಯ್ಯರವರ ಹೆಸರಿಗೆ ಕುಳುವಾಡಿಕೆ ಮೂಲಕ ಖಾತೆ ಆಗಿರುತ್ತದೆ. ಸದರಿಯವರು ಯಾವ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನಾನು ನೋಡಿಲ್ಲ. ಕುಳುವಾಡಿಕೆಯ ಮೂಲಕ ಮಂಜೂರಾದ ಆಸ್ತಿಗಳಿಗೆ ಸಂಬಂಧಿಸಿದಂತೆ ವ್ಯವಸ್ಥಾಪನಾ ಪತ್ರ ಮಾಡಿಕೊಂಡಿರುತ್ತಾರೆ. ಯಾವ ವರ್ಷದಲ್ಲಿ ಸದರಿ ವ್ಯವಸ್ಥಾಪನಾ ಪತ್ರ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಸದರಿ ವ್ಯವಸ್ಥಾಪನಾ ಪತ್ರ ನಾಗಯ್ಯ

ಮತ್ತು ಸಂಗಯ್ಯನವರ ಹತ್ತಿರ ಇರುತ್ತದೆ. ಸದರಿ ವ್ಯವಸ್ಥಾಪನಾ ಪತ್ರದಲ್ಲಿ ನಾನು ಪಾಲುದಾರನಾಗಿರುತ್ತೇನೆ. ಸಣ್ಣಯ್ಯ ಬಿನ್ ಈರಯ್ಯ ನನ್ನ ತಂದೆ. ನನ್ನ ತಂದೆ ತೀರಿ ಹೋಗಿ 30 ವರ್ಷ ಆಗಿರುತ್ತದೆ.

ನನ್ನ ತಂದೆ ಹೆಸರಿಗೆ ಸ ನಂ.38 ಕ್ಕೆ ಸಂಬಂಧಿಸಿದಂತೆ ಖಾತೆ ಕುಳುವಾಡಿಕೆ ಮಾಡಿಕೊಂಡಿದ್ದರಿಂದ ಆಗಿರುತ್ತದೆ. ನನ್ನ ತಂದೆ ಮರಣಾನಂತರ ಸದರಿ ಆಸ್ತಿಯ ಖಾತೆಯನ್ನು 1987-88 ರಲ್ಲಿ ಮಾಡಿಸಿಕೊಂಡಿರುತ್ತೇನೆ. ಸ ನಂ.43 ರಲ್ಲಿ ವಾದಿ 01 ಎಕರೆಯಲ್ಲಿ ಸ್ವಾಧೀನ ಹೊಂದಿರುತ್ತಾರೆ. ಸದರಿ ಆಸ್ತಿಯಲ್ಲಿ ಕಾಫಿ ತೋಟ ಮಾಡಿ 10 ವರ್ಷ ಆಗಿರುತ್ತದೆ. ಸದರಿ ಆಸ್ತಿಯಲ್ಲಿ ಬೋರ್ ವೆಲ್ ಕೊರೆಸಿ ಮೂರು ವರ್ಷ ಆಗಿರುತ್ತದೆ. ನಾನು ಸ ನಂ.37 ರಲ್ಲಿ ವಿಸ್ತೀರ್ಣ 01 ಎಕರೆಯಲ್ಲಿ ತೋಟ ಮಾಡಿರುತ್ತೇನೆ. ವಾದಿ ಮತ್ತು ಪ್ರತಿವಾದಿ ನಂಃ 3 ರಿಂದ 13 ರವರಿಗೆ ಮಾತ್ರ ದಾವಾ ಆಸ್ತಿಗಳ ಖಾತೆ ಬರಬೇಕು ಎಂದರೆ ಸರಿಯಲ್ಲ. ವಾದಿಗೆ ತಿಳಿಯದ ರೀತಿಯಲ್ಲಿ ನಾನು ಮತ್ತು 2ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನಗೂ ಮತ್ತು 2ನೇ ಪ್ರತಿವಾದಿಗೆ ದಾವಾ ಆಸ್ತಿಗಳು ಸೇರಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2ನೇ ಪ್ರತಿವಾದಿ ಕುಳುವಾಡಿಕೆದಾರರು ಎಂದು ತಾಲ್ಲೂಕು ಕಛೇರಿಯಲ್ಲಿ ದಾಖಲೆಯಲ್ಲಿ ನಮೂದಾಗಿರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಿಡಿ-1 ಈ ಕೇಸಿಗಾಗಿ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಮೂದಿಸಿದ ವ್ಯಕ್ತಿಗಳಿಗೂ ಮತ್ತು ಮಂಜೂರಾತಿ ಆದೇಶದಲ್ಲಿ

ನಮೂದಿಸಿದ ವ್ಯಕ್ತಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಹಾಜರುಪಡಿಸಿರುವ ವಂಶವೃಕ್ಷವನ್ನು ನೋಡಿಲ್ಲ. ವಾದಿಯ ಹೆಸರಿಗೆ ದಾವಾ ಆಸ್ತಿಗಳು ಮಂಜೂರಾತಿ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2ನೇ ಪ್ರತಿವಾದಿ ತಾಯಿ ನಾಗಮ್ಮನಿಗೂ ಮತ್ತು ವಾದಿಗೂ ಯವುದೇ ಸಂಬಂಧ ಇಲ್ಲ ಎಂದರೆ ಸರಿ. ನನ್ನ ಚಿಕ್ಕಮ್ಮನ ಹೆಸರನ್ನು ದುರುಪಯೋಪಡಿಸಿಕೊಂಡು ದಾವೆ ದಾಖಲಿಸಿರುತ್ತಾರೆ ಎಂದು ಹೇಳಿರುವುದು ಸರಿಯಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ತಾಯಿ ನಾಗಮ್ಮ ದಿಃ 03-06-1968 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ವಾದಿಯ ಹೆಸರಿಗೆ ದಾವಾ ಆಸ್ತಿಗಳು 28-04-1971 ರಲ್ಲಿ ಮಂಜೂರಾಗಿರುತ್ತವೆ. ದಾವಾ ಆಸ್ತಿಗಳು ಮಂಜೂರಾದಾಗ 2ನೇ ಪ್ರತಿವಾದಿಯ ತಾಯಿ ಮರಣ ಹೊಂದಿದ್ದು, ಮಂಜೂರಾತಿ ಆದೇಶದಲ್ಲಿ ನಮೂದಿಸಿದ ನಾಗಮ್ಮನಿಗೂ ಮತ್ತು 2ನೇ ಪ್ರತಿವಾದಿಯ ತಾಯಿ ನಾಗಮ್ಮನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನನಗೂ ಮತ್ತು 2ನೇ ಪ್ರತಿವಾದಿಗೂ ಮತ್ತು ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2ನೇ ಪ್ರತಿವಾದಿ ದಾವಾ ಆಸ್ತಿಗಳ ಖಾತೆಯನ್ನು ಮೋಸದಿಂದ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ಅಂಶಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು